# ಪುಟಾಣಿ ಪ್ರಶ್ನೆ

ಚೆಂದಿರನೂರಲಿ
ಏನಿಹುದಮ್ಮ
ತೋರಿಸು ಬಾರೇ ನೀ ಬೇಗ
ಫಳಫಳ ಹೊಳೆಯುವ
ತಾರೆಗಳಲ್ಲಿಗೆ
ಹೋಗೋಣ ಇಬ್ಬರೂ ನಾವೀಗ

ಚೆಂದಿರನೂರಲಿ
ಮಿನಮಿನ ಮಿರುಗುವ
ತಾರೆಗಳುಂಟು ಹಲವಾರು
ತಾರೆಯ ಪೋಣಿಸಿ
ಮಾಲೆಯ ಮಾಡಿ
ಹಾಕುವೆ ಕಂದ ನೀ ಬಾರೋ

ಚುಕ್ಕೆಗಳೇತಕೆ ಜಾರುವವಮ್ಮ
ಇರುಳಲಿ ಬಾಣವ ಬಿಟ್ಟಂತೆ?
ಫಳಫಳ ಹೊಳೆಯುವ
ಚೆಂದಿರನ ಮೊಗಕೆ
ಬೆಳಕನು ಬಿಟ್ಟವರಾರಮ್ಮ?

ಜಾರುವವೆಲ್ಲ ಚುಕ್ಕೆಗಳಲ್ಲ
ಉಲ್ಕೆಗಳು ಅವುಗಳ ಹೆಸರಂತೆ
ಸೂರ್ಯನ ಬೆಳಕೇ
ಚೆಂದಿರನ ಮೊಗಕೆ
ಚೆಂದಿರನೊಬ್ಬ ಕನ್ನಡಿಯಂತೆ

ಚೆಂದಿರನೇತಕೆ ಸೊರಗುವನಮ್ಮ
ಬಾನಂಗಳದಲಿ ಆಗಾಗ?
ಬಾನಂಗಳದಲಿ ಅವನನು ಕಂಡು
ಕೇಳೋಣ ಬಾರಮ್ಮ ನಾವೀಗ

ಸೂರ್ಯ ಭೂಮಿ ನಡುವೆ
ಚಂದ್ರ ಬಂದಾಗ
ಆಗುವುದಾಗ ಅಮವಾಸೆ
ಭೂಮಿಯು ಸರಿದರೆ
ಸೂರ್ಯನ ಬೆಳಕು
ಚೆಂದಿರನ ಮೊಗದಲಿ
ಬೆಳದಿಂಗಳ ಹೊಳಪು

**-ಸೋಮಲಿಂಗಪ್ಪ ಬೆಣ್ಣಿ**
**ಗುಳದಳ್ಳಿ**



# ನವಿಲಿನ ನಾಟ್ಯ



ದಟ್ಟಾರಣ್ಯದ ನಡುವಿನ ಬಯಲಲಿ
ಚೈತ್ರಕಾಲದ ಒಂದು ದಿನ
ಕಾಡಿನ ಒಡಲಲಿ ಏನಿದು ಸಂಭ್ರಮ
ಇದೆ.... ಇದೆ.... ಇಂದು ನವಿಲಿನ ನರ್ತನ !

ಬಂದವು ನೋಡಲು ಎಲ್ಲಾ ಮೃಗಗಳು
ಕೂರಲು ಹುಲ್ಲಿನ ಜಮಖಾನ
ಹಕ್ಕಿಗಳೆಲ್ಲಾ ಮರಗಳ ಮೇಲೆ
'ನಮದೇನಿದ್ದರೂ ಮೇಲಿನ ಸ್ಥಾನ ' !

ಹಸಿರಿನ ಬಯಲೇ ವೇದಿಕೆಯಾದರೆ
ಹಿನ್ನೆಲೆಗಿತ್ತು ಮುಗಿಲಿನ ಪರದೆ
ತರು ಲತೆ ಶೋಭಿಪ ಸುಂದರ ರಂಗದಿ
ಹೂಗಳ ಸುಂದರ ರಂಗೋಲಿ

ಬಂದೇ ಬಿಟ್ಟಿತು ವೈಯಾರದಿ ಬಳುಕುತ
ಕಾಡಿನ ರಾಜ್ಯದ ನಾಟ್ಯ ಮಯೂರಿ
ಚಪ್ಪಾಳೆ ತಟ್ಟುತ ಸಿಳ್ಳೆಯ ಹಾಕಿತು
ಪ್ರೇಕ್ಷಕ ವೃಂದವು ಸ್ವಾಗತ ಕೋರಿ

ನೀಲಿಯ ಗರಿಗಳ ಉಡುಗೆಯ ತೊಟ್ಟು
ಲಜ್ಜೆಯ ಗೆಜ್ಜೆಯ ಕಾಲಿಗೆ ಕಟ್ಟಿ
ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟು
ಬಂದಿತು ಬೆಡಗಿನ ಆಭರಣವಿಟ್ಟು

ರಂಗವ ಬೆಳಗಲು ಮಿಂಚಿನ ಬೆಳಕು
ಡಮ ಡಮವೆಂದಿತು ಗುಡುಗಿನ ಮದ್ದಲೆ
ಗಾಳಿಯು ಹಾಡಲು ಇಂಪಿನ ಗಾಯನ
ಮಳೆ ಹನಿ ಹಾಕಿತು ನಟುವಾಂಗ

ಥೈ..ಥೈ...ಥಕಧಿಮಿ... ತದಿಗಿಣ ತೋಂ...
ಎಂದು
ತಾಳಕೆ ತಪ್ಪದೆ ಹೆಜ್ಜೆಯ ಹಾಕುತ
ಬಾಗುತ ಬಳುಕುತ ಭಾವವ ತೋರುತ
ಲಾಸ್ಯವ ಬೀರುತ ಕುಣಿಯಿತು ಚಂದದಿ,
ಅಂದದ ನವಿಲು

ಕಣ್ಣನು ಹೊರಳಿಸಿ ಕುತ್ತಿಗೆ ತಿರುಗಿಸಿ
ದೇವರ ಸ್ತುತಿಸಿ ಪುಷ್ಪಾಂಜಲಿ ನರ್ತಿಸಿ
ಅಲರಿಪು ಜತಿಸ್ವರ , ಜಾವಳಿ ವರ್ಣ
ಕೊನೆಯಲ್ಲಿತ್ತು ತಿಲ್ಲಾನ

ಗೆಜ್ಜೆಯ ನಾದಕೆ ತಲೆಯನು ತೂಗುತ
ನವಿಲಿನ ನಾಟ್ಯವ ಹರುಷದಿ ಹೊಗಳುತ
ಚದುರಿದವೆಲ್ಲಾ ಖಗ ಮೃಗ ಸಂಕುಲ
ಹಿಗ್ಗಿದ ನವಿಲು ನಕ್ಕಿತು ಕಿಲ...ಕಿಲ...

**-ಚಂದ್ರಿಕಾ ಹೆಗಡೆ**
**ಬೆಂಗಳೂರು**